CS (Main) Exam, 2020

URC-U-KND

# ಕನ್ನಡ / KANNADA

## ಪತ್ರಿಕೆ I / Paper I

## (ಸಾಹಿತ್ಯ) / ( LITERATURE )

| | |
|---|---|
| ವೇಳೆ : ಮೂರು ಗಂಟೆ | ಗರಿಷ್ಠ ಅಂಕಗಳು : 250 |
| Time Allowed : Three Hours | Maximum Marks : 250 |

---

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

**ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :**

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ **1** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** question from each section.*

*The number of marks carried by a question / part is indicated against it.*

*Answers must be written in **KANNADA (Kannada script)**.*

*Word limit in questions, wherever specified, should be adhered to.*

*Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.*

---

## SECTION A

**Q1.** **ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು. ಪ್ರತಿ ಉಪಪ್ರಶ್ನೆಗೆ 10 ಅಂಕಗಳು.** *10×5=50*

(a) ಭಾಷೆಯ ಸಾಮಾನ್ಯ ಲಕ್ಷಣಗಳು *10*

(b) ಪಂಪ ಭಾರತದಲ್ಲಿ ಶ್ರೀ ಕೃಷ್ಣನ ಪಾತ್ರ ಚಿತ್ರಣ *10*

(c) ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ಅಕ್ಕಮಹಾದೇವಿ *10*

(d) ಬಸವಣ್ಣನವರ ವಚನಗಳಲ್ಲಿ ಭಕ್ತಿಯ ಸ್ವರೂಪ *10*

(e) ಬಂಡಾಯ ಸಾಹಿತ್ಯದ ತಾತ್ತ್ವಿಕ ನೆಲೆಗಳು *10*

**Q2.** (a) ಕನ್ನಡ ಭಾಷೆಯಲ್ಲಿ ಕಂಡುಬರುವ ಧ್ವನಿಬದಲಾವಣೆಗಳನ್ನು ಚಾರಿತ್ರಿಕವಾಗಿ ಗುರುತಿಸಿ. *15*

(b) ಪಂಪ ಮಹಾಕವಿ ಚಿತ್ರಿಸಿರುವ ಕರ್ಣನ ಪಾತ್ರವನ್ನು ಕುರಿತು ವಿವೇಚಿಸಿ. *15*

(c) ಜನ್ನಕವಿಯ 'ಯಶೋಧರ ಚರಿತೆ' ಕಾವ್ಯದ 'ರತಿ–ವಿರತಿ' ಆಶಯವನ್ನು ಕುರಿತು ಚರ್ಚಿಸಿ. *10*

(d) ಹರಿಹರ ಕವಿಯ ಸ್ತ್ರೀ ಪಾತ್ರಗಳ ವೈವಿಧ್ಯತೆಯನ್ನು ಕುರಿತು ಚರ್ಚಿಸಿ. *10*

**Q3.** (a) ಕನ್ನಡದ ಉಪಭಾಷೆಗಳನ್ನು ವಿವರಿಸಿ. *15*

(b) ರನ್ನಕವಿಯು ಸಿಂಹಾವಲೋಕನ ಕಥಾತಂತ್ರವನ್ನು ಹೇಗೆ ಬಳಸಿದ್ದಾನೆ ? ವಿವರಿಸಿ. *15*

(c) 'ಕುಮಾರವ್ಯಾಸ ಭಕ್ತಿಕವಿ' ಎಂಬ ಹೇಳಿಕೆಯನ್ನು ವಿಶ್ಲೇಷಿಸಿ. *10*

(d) ನವೋದಯ ಸಾಹಿತ್ಯದಲ್ಲಿ ಕಂಡುಬರುವ ನಿಸರ್ಗ ಪ್ರೀತಿಯನ್ನು ಕುರಿತಂತೆ ಬರೆಯಿರಿ. *10*

**Q4.** (a) ಕನ್ನಡ ಭಾಷೆಯ ಮೇಲಿನ ಅನ್ಯ ಭಾಷಾ ಪ್ರಭಾವವನ್ನು ಉದಾಹರಣೆಗಳೊಂದಿಗೆ ವಿವರಿಸಿ. *15*

(b) 'ಭರತೇಶ ವೈಭವ' ಕಾವ್ಯದಲ್ಲಿನ ಯೋಗ–ಭೋಗದ ತೊಡಕನ್ನು ವಿಮರ್ಶಿಸಿ. *15*

(c) ಪುರಂದರದಾಸರ ಕೀರ್ತನೆಗಳಲ್ಲಿ ವ್ಯಕ್ತವಾಗಿರುವ ಮಾನವನ ಢಂಬಾಚಾರಗಳ ಕಟು ಟೀಕೆಯನ್ನು ಪರಿಚಯಿಸಿ. *10*

(d) ದಲಿತ–ಬಂಡಾಯ ಸಾಹಿತ್ಯದ ಕಥೆಗಳನ್ನು ಕುರಿತು ಬರೆಯಿರಿ. *10*

## SECTION B

**Q5.** **ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು. ಪ್ರತಿ ಉಪಪ್ರಶ್ನೆಗೆ 10 ಅಂಕಗಳು.** *10×5=50*

(a) ಕಾವ್ಯಕ್ಕೆ ಅಲಂಕಾರಗಳ ಅಗತ್ಯತೆ *10*

(b) ಸ್ತ್ರೀವಾದಿ ವಿಮರ್ಶೆಯ ಪರಿಕಲ್ಪನೆಗಳು *10*

(c) ಮಧ್ಯಕಾಲೀನ ಕನ್ನಡ ಕಾವ್ಯ ಮತ್ತು ಗಮಕ *10*

(d) ರಾಘವಾಂಕನ ಹರಿಶ್ಚಂದ್ರ ಪಾತ್ರಚಿತ್ರಣ *10*

(e) ಕನ್ನಡ ಸಾಹಿತ್ಯದ ಮೇಲೆ ಜೈನ ಧರ್ಮದ ಪ್ರಭಾವ *10*

**Q6.** (a) ಭರತನ 'ರಸ ಸಿದ್ಧಾಂತ' ವನ್ನು ವಿಮರ್ಶಿಸಿ. *15*

(b) ವಸಾಹತೋತ್ತರ ವಿಮರ್ಶೆಯ ನೆಲೆಗಳನ್ನು ವಿವರಿಸಿ. *15*

(c) ಕನ್ನಡ ಸಂಸ್ಕೃತಿಗೆ ಬೌದ್ಧ ಧರ್ಮದ ಕೊಡುಗೆಗಳನ್ನು ಕುರಿತು ಚರ್ಚಿಸಿ. *10*

(d) ಕರ್ನಾಟಕದ ದೇವಾಲಯಗಳ ಮದನಿಕಾ ಮೂರ್ತಿಗಳು ಸೃಷ್ಟಿಸುವ ನೃತ್ಯಪರಂಪರೆಯನ್ನು ಕುರಿತು ಚರ್ಚಿಸಿ. *10*

**Q7.** (a) ರೀತಿ ಪ್ರಸ್ಥಾನ ಮತ್ತು ರೂಪನಿಷ್ಠ ವಿಮರ್ಶೆ. *15*

(b) ಆಧುನಿಕ ವಿಮರ್ಶೆಯ ಲಕ್ಷಣಗಳನ್ನು ತಿಳಿಸಿ. *15*

(c) ಭಾರತೀಯ ವಾಸ್ತುಶಿಲ್ಪಕ್ಕೆ ರಾಷ್ಟ್ರಕೂಟರು ನೀಡಿರುವ ಕೊಡುಗೆಯನ್ನು ತಿಳಿಸಿ. *10*

(d) ಕರ್ನಾಟಕದಲ್ಲಿ ಬೆಳೆದುಬಂದ ಮುಸ್ಲಿಂ ವಾಸ್ತುಶೈಲಿಯ ಲಕ್ಷಣಗಳನ್ನು ಉದಾಹರಣೆಗಳ ಸಮೇತ ತಿಳಿಸಿ. *10*

**Q8.** (a) ಪ್ರಾಯೋಗಿಕ ವಿಮರ್ಶೆ ಎಂದರೇನು ? ಉದಾಹರಣೆಯೊಂದಿಗೆ ವಿವರಿಸಿ. *15*

(b) 'ವಾಕ್ಯಂ ರಸಾತ್ಮಕಂ ಕಾವ್ಯ' ಈ ಹೇಳಿಕೆಯನ್ನು ಕುರಿತು ಚರ್ಚಿಸಿ. *15*

(c) ವಚನ ಸಾಹಿತ್ಯದ ಸಾಮಾಜಿಕ ಕಳಕಳಿಯ ವಿವಿಧ ನೆಲೆಗಳನ್ನು ತಿಳಿಸಿ. *10*

(d) ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪದ ವೈಶಿಷ್ಟ್ಯಗಳನ್ನು ಪರಿಚಯಿಸಿ. *10*